142
15/ಜೂ6

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಎನ್. ಮಂಜೇಗೌಡ, ಇವರು ನಿಯಮ-72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ.**

**ಸೂಚನೆ:-**

ಯಲಹಂಕದಲ್ಲಿ ಬಫರ್ ಜೋನಲ್ಲಿ ಹಲವಾರು ಕಟ್ಟಡಗಳು ನಿರ್ಮಾಣವಾಗಿ ಅವುಗಳನ್ನು ಖರೀದಿಸುವ ಸಾರ್ವಜನಿಕರು ಮೋಸ ಹೋಗುತ್ತಿರುವ ಬಗ್ಗೆ ಮತ್ತು ಯಲಹಂಕ ಸಂತೆ + ಬೀದಿ ರಸ್ತೆ ಸ.ನಂ. 103, 104, 105ರಲ್ಲಿ ಬಫರ್ ಜೋನ್ ಗುರುತಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಜನರು ಮೋಸ ಹೋಗದಂತೆ ಎಚ್ಚರಿಕೆ ವಹಿಸುವ ಬಗ್ಗೆ ಮತ್ತು ಸದರಿ ಜಮೀನಿನ ಮಾಲೀಕರ ಬಗ್ಗೆ ವಿವರ ನೀಡುವುದು ಹಾಗೂ ಈ ಜಮೀನು ಯಾರ ಯಾರ ಹೆಸರಿನಲ್ಲಿ GPA ಆಗಿದೆ ಅವರ ವಿವರದ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಹೇಳಿಕೆ:**

ಯಲಹಂಕ ಹೋಬಳಿ, ಯಲಹಂಕ ಗ್ರಾಮದ ಸ.ನಂ. 103ರ ಹಾಲಿ ಪಹಣಿಯಂತೆ ಕಾಲಂ ನಂ. 3ರಲ್ಲಿ ಒಟ್ಟು 1-37 ಎಕರೆ/ಗುಂಟೆ ವಿಸ್ತೀರ್ಣವಿದ್ದು, ಕಾಲಂ ನಂ. 9ರಲ್ಲಿ ವೈ.ಸಿ. ಅಣ್ಣಯ್ಯಪ್ಪ ವಗೈರೆ 0-00; ವೈ.ಆರ್. ಕೃಷ್ಣಮೂರ್ತಿ ಬಿನ್ ರಾಮಯ್ಯ, 00-25 ಗುಂಟೆ, ಸಿ.ಕೆ.ಸೋಮಶೇಖರ್ ರವರಿಗೆ 00-25 ಗುಂಟೆ ಖಾತೆ ದಾಖಲಾಗಿರುತ್ತದೆ; ಸ.ನಂ. 104ರಲ್ಲಿ ಒಟ್ಟು 00-39 ಗುಂಟೆ 'ಬಿ' ಖರಾಬ್ 00-02 ಗುಂಟೆ ಜಾತ ಉಳಿಕೆ 00-37 ಗುಂಟೆ ಜಮೀನಿಗೆ ಬಿ.ಎನ್. ರಾಜಣ್ಣ ಬಿನ್ ಲೇಟ್ ಆರ್ ನರಸಿಂಹಯ್ಯ ಮತ್ತು ಇತರರು ಜಂಟಿಯಾಗಿ ಖಾತೆ ದಾಖಲಾಗಿರುತ್ತದೆ ಮತ್ತು ಸರ್ವೆ ನಂ. 105/1ರಲ್ಲಿ ರಾಮಾಂಜಿನಮ್ಮ ರವರ ಹೆಸರಿನಲ್ಲಿ 1-05 ಎಕರೆ/ಗುಂಟೆ ವಿಸ್ತೀರ್ಣದ ಜಮೀನಿಗೆ ಖಾತೆ ದಾಖಲಾಗಿರುತ್ತದೆ ; ಸರ್ವೆ ನಂ. 105/2 ರಲ್ಲಿ ಒಟ್ಟು 1-36 ಎಕರೆ/ಗುಂಟೆ ಪೈಕಿ 00-15 ಗುಂಟೆ ಖರಾಬ್ ಜಾತ ಉಳಿಕೆ 1-21 ಎಕರೆ/ಗುಂಟೆ ಇದ್ದು, ಪಹಣಿ ಕಾಲಂ ನಂ. 9ರಲ್ಲಿ ಸಂತೆ ಮೈದಾನ ಹೆಸರಿನಲ್ಲಿ ಖಾತೆ ದಾಖಲಾಗಿರುತ್ತದೆ. ಸದರಿ ಜಮೀನಿನಲ್ಲಿ ಒಂದು ಕಲ್ಯಾಣಿ ಹಾಗೂ ಆಂಜನೇಯ ದೇವಸ್ಥಾನ ಇರುವುದು ಕಂಡುಬಂದಿರುತ್ತದೆ ಹಾಗೂ ಎ.ಪಿ.ಎಂ.ಸಿ ಇಲಾಖೆಯಿಂದ ರೈತರು ಸಂತೆ ನಿರ್ವಹಣೆ ಕಾರ್ಯ ನಡೆಯುತ್ತದೆ, ಸರ್ವೆ ನಂ. 103 ಮತ್ತು 104ರಲ್ಲಿ ಎಫ್.ಡಿ.ಪಿ. 111/2014 ರಂತೆ ಪ್ರಕರಣ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡಿರುವುದು ಕಂಡುಬಂದಿರುವುದಿಲ್ಲ. ಮುಂದುವರಿದು, ಸದರಿ ಜಮೀನುಗಳು ಬಫರ್ ಜೋನ್‌ನಲ್ಲಿರುವ ಬಗ್ಗೆ ಮೋಜಿಣಿದಾರರಿಂದ ಅಳತೆ ಕಾರ್ಯ ನಿರ್ವಹಿಸಬೇಕಾಗಿರುವುದರಿಂದ ಹಾಗೂ ಜಿ.ಪಿ.ಎ. ನೋಂದಣಿಯಾಗಿರುವ ಬಗ್ಗೆ ಉಪನೋಂದಣಾಧಿಕಾರಿಯವರಿಂದ ವರದಿ ಪಡೆಯಬೇಕಾಗಿರುತ್ತದೆ. ಅದರಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ.

(ಡಾ: ಜಿ. ಪರಮೇಶ್ವರ)
ಉಪ ಮುಖ್ಯಮಂತ್ರಿ

ಸಂಖ್ಯೆ: ಆರ್‌ಡಿ 129 ಎಲ್‌ಜಿಕ್ಯೂ 2026